ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

18

ಇಲಾಖೆ / ವಿಷಯ : DEPARTMENT / SUBJECT: ವಿಧಾನಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE: 25/3/21

## ಅಶ್ಲೀಲ ವಿಡಿಯೊ ಬಹಿರಂಗ ಕುರಿತ ಬೈದಾಟ ಬೆನ್ನಲ್ಲೇ 'ಏಕಪತ್ನಿ'ಯ ರಂಪಾಟ

## ಕೊರೊನಾ ತಡೆ ಇತ್ಯಾದಿ ಜನಪರ ಚರ್ಚೆ ಬದಲು ಗದ್ದಲದಲ್ಲೇ ಕಲಾಪ ಅಂತ್ಯ

# ಖಾಸಗಿ ವಿಷಯದಲ್ಲೇ ಸಮಾಪ್ತಿ

▫ ವಿಕ ಸುದ್ದಿಲೋಕ ಬೆಂಗಳೂರು

ಅಶ್ಲೀಲ ವಿಡಿಯೊ ಬಯಲು, ಏಕಪತ್ನಿ ವ್ರತಸ್ಥ ಹೇಳಿಕೆ ಸೇರಿದಂತೆ ವಿವಾದಾತ್ಮಕ ವಿಚಾರಗಳಿಗೆ ಎರವಾದ ರಾಜ್ಯ ವಿಧಾನಮಂಡಲ ಅಧಿವೇಶನಕ್ಕೆ ಬುಧವಾರ ತೆರೆಬಿದ್ದಿದೆ. ಇದರೊಂದಿಗೆ ಬಜೆಟ್ ಅಧಿವೇಶನದಲ್ಲೂ ಜನಪರ ಹಾಗೂ ಅಭಿವೃದ್ಧಿ ಪರ ಚರ್ಚೆಗೆ ಅವಕಾಶ ದೊರಕದಂತಾಯಿತು.

ಈ ಬಾರಿ ಮಾರ್ಚ್ 31ರವರೆಗೂ ಅಧಿವೇಶನ ನಡೆಸಲು ನಿರ್ಧರಿಸಲಾಗಿತ್ತು. ಆದರೆ, ವಿಡಿಯೊ ಗದ್ದಲದ ಕಾರಣದಿಂದ ಒಂದು ವಾರ ಮೊದಲೇ ಅಧಿವೇಶನ ಬರಖಾಸ್ತುಗೊಳ್ಳುವಂತಾಗಿದೆ. ಹಾಗಾಗಿ ವಿತ್ತೀಯ ಕಲಾಪದ ಮೇಲೆ ಚರ್ಚಿಸಲು ಹಲವು ಶಾಸಕರು ಅಪೇಕ್ಷಿಸಿದ್ದರೂ ಅವರಿಗೆ ನಿರಾಸೆಯಾಗುವಂತಾಯಿತು. ಇಲಾಖಾವಾರು ಬೇಡಿಕೆಗಳ ಮೇಲಿನ ಚರ್ಚೆಯೂ ಮೊಟಕುಗೊಳ್ಳುವಂತಾಯಿತು.

ಮಾರ್ಚ್ 4ರಿಂದ 24ರವರೆಗೆ ವಿಧಾನ ಮಂಡಲ ಅಧಿವೇಶನ ನಡೆದಿದೆ. ವಿಧಾನಸಭೆಯಲ್ಲಿ 44 ಗಂಟೆ 30 ನಿಮಿಷ ಅವಧಿಯ ಕಲಾಪ ನಡೆದಿದೆ. ಈ ಪೈಕಿ ಮೊದಲ ಎರಡು ದಿನ(ಮಾ. 4, 5) 'ಒಂದು ರಾಷ್ಟ್ರ-ಒಂದು ಚುನಾವಣೆ' ವಿಶೇಷ ಚರ್ಚೆ ವಿರೋಧಿಸಿ ಪ್ರತಿಪಕ್ಷ ಕಾಂಗ್ರೆಸ್ ಧರಣಿ ನಡೆಸಿತ್ತು.



ವಿಧಾನ ಪರಿಷತ್‌ನಲ್ಲಿ ಬುಧವಾರ ಕಾಂಗ್ರೆಸ್ ಸದಸ್ಯರು ಸಿಡಿಗಳನ್ನು ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.

**ಸುಧಾಕರ್ ಹೇಳಿದ್ದೇನು?**

ಯಾರು ಇವತ್ತು ಬಹಳ ಮರ್ಯಾದಾ ಪುರುಷೋತ್ತಮರು ಎಂದು ಹೇಳಿಕೊಳ್ಳುವ ಕಾಂಗ್ರೆಸ್, ಜೆಡಿಎಸ್ ನಾಯಕರಿಗೆ ಸವಾಲು ಹಾಕುತ್ತೇನೆ. 225 ಶಾಸಕರು ಕೂಡ ವಿಚಾರಣೆ ಎದುರಿಸಲಿ. ನಿಮ್ಮ ನಿಮ್ಮ ಜೀವನದಲ್ಲಿ ಯಾರ್ಯಾರು ಅನೈತಿಕ ಸಂಬಂಧ ಇಟ್ಟುಕೊಂಡಿಲ್ಲವೆಂದು ಪ್ರೂವ್ ಆಗಲಿ. ನನ್ನನ್ನೂ ಸೇರಿದಂತೆ. ಯಾರ್ಯಾರ ಚರಿತ್ರೆ ಏನೆಂದು ಗೊತ್ತಾಗಬೇಕಲ್ಲ?

## ಸಚಿವ ಸುಧಾಕರ್ ಹೇಳಿಕೆಗೆ ಆಕ್ಷೇಪ

**ಬೆಂಗಳೂರು:** ಅಶ್ಲೀಲ ವಿಡಿಯೊ ಸುತ್ತವೇ ಸುತ್ತುತ್ತಿದ್ದ ವಿಧಾನಮಂಡಲ ಕಲಾಪ ಬುಧವಾರ 'ಏಕಪತ್ನಿ ವ್ರತಸ್ಥ' ಸಂಗತಿಯತ್ತ ತಿರುಗಿತು. ಆರೋಗ್ಯ ಸಚಿವ ಡಾ. ಕೆ ಸುಧಾಕರ್ ಸದನದ ಹೊರಗೆ ನೀಡಿದ್ದ ಈ ಕುರಿತ ಹೇಳಿಕೆ ವಿರುದ್ಧ ಕಾಂಗ್ರೆಸ್ ಶಾಸಕರು ಮುಗಿಬಿದ್ದರು. ಕಾಂಗ್ರೆಸ್‌ನ ಆರ್.ವಿ.ದೇಶಪಾಂಡೆ ವಿಧಾನಸಭೆಯಲ್ಲಿ ಮೊದಲು ಇದನ್ನು ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ, ಜೆಡಿಎಸ್‌ನ ಬಂಡೆಪ್ಪ ಕಾಶೆಂಪುರ ದನಿಗೂಡಿಸಿದರು. ಈ ಸಂದರ್ಭದಲ್ಲಿ ಬಿಜೆಪಿಯ ಕೆಲ ಶಾಸಕರು ಕಾಂಗ್ರೆಸ್ ವಿರುದ್ಧ ಧಿಕ್ಕಾರ ಕೂಗಿದರು. ಸಚಿವ ಸುಧಾಕರ್ ಸದನದ ಹೊರಗೆ ನೀಡಿದ ಹೇಳಿಕೆ ಸಂಬಂಧ ಆಕ್ಷೇಪವಿದ್ದರೆ ಸದನದ ಹೊರಗಡೆಯೇ ಪ್ರಶ್ನಿಸಬಹುದು ಎಂದು ಸಚಿವ ಬಸವರಾಜ ಬೊಮ್ಮಾಯಿ ಹೇಳಿದರು.

**ಸಚಿವರ ಸ್ಪಷ್ಟನೆ**

ಸಚಿವರ ವಿರುದ್ಧ ಕೆಲ ನಾಯಕರು ಮಾಡುತ್ತಿರುವ ತೇಜೋವಧೆ, ಅಪಮಾನ, ನೋವು ಯಾರಿಗೂ ಅರಿವಾಗಲಿಲ್ಲ, ನಮಗೆ ನೋವುಂಟು ಮಾಡುತ್ತಿರುವವರ ವಿರುದ್ಧ ನೀಡಿದ ಹೇಳಿಕೆಯನ್ನು ಶಬ್ದಶಃ ಅರ್ಥ ಮಾಡಿಕೊಳ್ಳದೇ ಭಾವನೆಗಳ ಆಧಾರದಲ್ಲಿ ನೋಡಬೇಕು. ಆದರೂ ಈ ಹೇಳಿಕೆಯಿಂದ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಸ್ಪಷ್ಟಪಡಿಸಿದ್ದಾರೆ. ''ಅಪರಾಧ ಮಾಡಿದವರಂತೆ ನಮ್ಮ ವ್ಯಕ್ತಿತ್ವಕ್ಕೆ ಕಳಂಕ ತಂದು ಸಾರ್ವಜನಿಕ ಜೀವನ ಮುಗಿಸಲು ಹೊರಟಿದ್ದಾರೆ. ಅನಿವಾರ್ಯವಾಗಿ ನನ್ನ ಮನಸ್ಸಿಗಾದ ನೋವನ್ನು ಬಹಿರಂಗವಾಗಿ ತೋಡಿಕೊಂಡಿದ್ದೇನೆ,'' ಎಂದಿದ್ದಾರೆ.

ಇಲ್ಲಿರುವ ಎಲ್ಲರೂ ವ್ಯಭಿಚಾರಿಗಳಾ? ಸುಧಾಕರ್ ಹೇಳಿಕೆ ಸದನದ ಹಕ್ಕುಚ್ಯುತಿ ಆಗುತ್ತದೆ. -ಸಿದ್ದರಾಮಯ್ಯ

ನನಗಿರುವುದು ಒಬ್ಬಳೇ ಹೆಂಡತಿ, ಒಂದೇ ಸಂಸಾರ.
- ಡಿ.ಕೆ.ಶಿವಕುಮಾರ್

ಭೂಮಿಯ ಮೇಲಿನ ಪ್ರತಿ ಜೀವಿಗೂ ದೈಹಿಕ ಪ್ರಕ್ರಿಯೆ ಸಹಜ. ಯಾರು ಹರಿಶ್ಚಂದ್ರ? ಯಾರು ಅಲ್ಲ? ಹೇಗೆ ಹೇಳುವುದು?
- ಎಚ್.ಡಿ.ಕುಮಾರಸ್ವಾಮಿ

## ಖಾಸಗಿ ವಿಷಯದಲ್ಲೇ ಸಮಾಪ್ತಿ

» ಮೊದಲ ಪುಟದಿಂದ

ಕಡೆಯ ಮೂರು ದಿನದಲ್ಲಿ(ಮಾ. 22, 23, 24) ಸಿ.ಡಿ ವಿಚಾರದಲ್ಲಿ ಕಾಂಗ್ರೆಸ್ ಶಾಸಕರು ಧರಣಿ ನಡೆಸಿದರು. ಹಾಗಾಗಿ ಈ ಅವಧಿಯಲ್ಲಿ ಚರ್ಚೆ ಸಾಧ್ಯವಾಗಲಿಲ್ಲ. 'ಒಂದು ರಾಷ್ಟ್ರ-ಒಂದು ಚುನಾವಣೆ', ವಿತ್ತೀಯ ಕಲಾಪ ಹಾಗೂ ಬೇಡಿಕೆಗಳ ಮೇಲಿನ ಚರ್ಚೆಗೆ ಜೆಡಿಎಸ್ ಶಾಸಕರು ಸಿದ್ಧರಿದ್ದರೂ ಅವರಿಗೆ ಅವಕಾಶವೇ ದೊರಕಲಿಲ್ಲ.

**ಎಷ್ಟೊಂದು ವಿಚಾರಗಳಿವೆ?:** ಕೊರೊನಾ ಎರಡನೇ ಅಲೆ ಬಗ್ಗೆ ಆತಂಕವಿದೆ. ಈ ಬಗ್ಗೆ ಸರಕಾರವನ್ನು ಪ್ರಶ್ನಿಸಿ ಜಾಗೃತಗೊಳಿಸುವ ಅವಕಾಶವನ್ನು ಶಾಸಕರು ಬಳಸಿಕೊಳ್ಳಬಹುದಿತ್ತು. ಹಾಗೆಯೇ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ, ಬರ ನಿರ್ವಹಣೆ ಬಗ್ಗೆ ಮುಂಜಾಗ್ರತಾ ಕ್ರಮಕ್ಕೆ ಸರಕಾರವನ್ನು ಸಜ್ಜುಗೊಳಿಸಬಹುದಿತ್ತು. ಇಲಾಖಾವಾರು ಚರ್ಚೆ ನಡೆದಿದ್ದರೆ ಸಚಿವ ಸಂಪುಟದ ಎಲ್ಲ ಸಚಿವರಿಗೂ ಚುರುಕು ಮುಟ್ಟಿಸಲು ಸಾಧ್ಯವಾಗುತ್ತಿತ್ತು. ಆದರೆ, ಈ ನಿಟ್ಟಿನಲ್ಲಿ ಗಂಭೀರ ಹೆಜ್ಜೆಯಿರಿಸುವ ಸಕಾರಾತ್ಮಕ ಧೋರಣೆ ಕಾಣಸಲಿಲ್ಲ.